


ವಿಶ್ವದ ಅತಿದೊಡ್ಡ ಜಾನಪದ ಉತ್ಸವ ಎಂದು ಜರ್ಮನ್ನರು ಕರೆದುಕೊಳ್ಳುವ 'ಬಿಯರ್ ಹಬ್ಬ'ದಲ್ಲಿ ಜನಸ್ತೋಮ



ಈ ಜನುಮವೇ ಆಹಾ! ದೊರಕಿದೆ ರುಚಿ ಸವಿಯಲು...

ಬೇರೆಡೆಯಿಂದ ಬಂದ ಲಕ್ಷಾಂತರ ಜನ ಒಂದೆರಡು ದಿನ ಇದ್ದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಮಕ್ಕಳಿಗಾಗಿ ಮೈ ಜುಮ್ಮೆನಿಸುವ ಆಮೋದ ಪ್ರಮೋದಗಳ ಕ್ರೀಡೆಗಳಿರುತ್ತವೆ. ಈ ಬಯಲ ತುಂಬ ಪ್ರಖ್ಯಾತ ಮದ್ಯ ತಯಾರಿಕಾ ಕಂಪನಿಗಳು ವಿಸ್ತಾರವಾದ ಅಡ್ಡೆಗಳನ್ನು ತೆರೆದಿರುತ್ತವೆ.

ಒಂದೊಂದು ಅಡ್ಡೆಯಲ್ಲಿ ಐದು ಸಾವಿರದಿಂದ ಹತ್ತು ಸಾವಿರ ಜನರು ಒಮ್ಮೆಲೇ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಟೇಬಲ್ಲುಗಳ ವ್ಯವಸ್ಥೆ ಇರುತ್ತದೆ. ಇವು ತುಂಬಿ ತುಳುಕಿದಾಗ ನಿಂತೇ ಪಾಲ್ಗೊಳ್ಳುವವರಿಗಾಗಿ ಮತ್ತೆ ಎರಡು ಸಾವಿರ ಜನರಿಗೆ ಅವಕಾಶವಿರುತ್ತದೆ. ಅದೂ ಭರ್ತಿಯಾದರೆ ಹೊರಗೆ ಕೂಡ ಟೇಬಲ್ಲುಗಳ ಸಾಲುಗಳಿರುತ್ತವೆ. ನಟ್ಟ ನಡುವೆ ಆಯಾ ಕಂಪನಿಯ ಹೆಮ್ಮೆಯ ಸಂಗೀತದ ಬ್ಯಾಂಡ್ ಎತ್ತರದ ವೇದಿಕೆಯಲ್ಲಿ ನೆರೆದು ದಿನವಿಡೀ ಸಂಗೀತ ನುಡಿಸುತ್ತದೆ. ಆರು ತಿಂಗಳಿಗಿಂತ ಮೊದಲೇ ಈ ಟೇಬಲ್ಲುಗಳನ್ನು ಕಾದಿರಿಸಿಕೊಳ್ಳುತ್ತಾರೆ. ನಾಲ್ಕು ಜನ ಕುಳಿತುಕೊಳ್ಳುವ ಪ್ರತಿ ಟೇಬಲ್ಲನ್ನು ಕಾದಿರಿಸಲು ಒಂದು ಸಾವಿರ ಯೂರೋಗಳನ್ನು (ಸುಮಾರು 8000 ರೂಪಾಯಿ) ಶುಲ್ಕವಾಗಿ ನೀಡಬೇಕಾಗುತ್ತದೆ. ಹೀಗೆ ಕಾದಿರಿಸಿದ ಪ್ರತಿ ಟೇಬಲ್ಲಿಗೆ ಹನ್ನೆರಡು ಲೀಟರ್ ಬಿಯರ್ ಮತ್ತು ಬೇಯಿಸಿದ ಇಡೀ ಕೋಳಿಯನ್ನು